# ಅಪ್ಪನೂ ಆಗಿದ್ದಳು ನನ್ನಮ್ಮ!



## ನಮ್ಮಪ್ಪ ನಮ್ಮಮ್ಮ

'ಸಾವು ನಿಗೂಢ..'!

ಸಾವಿನ ವಿಸ್ಮಯದ ಬಗ್ಗೆ ಸ್ನೇಹಿತರಿಗೆ ಬರೆದಿದ್ದ ಪತ್ರದಲ್ಲಿ ಪ್ರಸ್ತಾಪಿಸಿದ್ದ ನನ್ನ ತಂದೆ ಹಿರಿಯ ಸಮಾಜವಾದಿ ಎಸ್. ವೆಂಕಟರಾಮ್ ಅದಾದ ಕೆಲವೇ ದಿನಗಳಲ್ಲಿ ಅಸು ನೀಗಿದ್ದರು. ಸಾವು ನಿಗೂಢ ಮಾತ್ರವಲ್ಲ, ಅನಿರೀಕ್ಷಿತ ಸಹ ಎಂದು ಸುಮಾರು ಎರಡೂವರೆ ದಶಕಗಳ ಹಿಂದೆಯೇ ನನಗೆ ಅರಿವಾಗಿತ್ತು. ಆದರೂ ಆಶಾವಾದಿಯಾಗಿ, ಆಸ್ಪತ್ರೆಯಲ್ಲಿದ್ದ ನನ್ನ ತಾಯಿ ಸರೋಜ ವೆಂಕಟರಾಮ್ ಅವರನ್ನು ನೋಡಲು ದುಬೈನಿಂದ ಹಠಾತ್ತನೆ ಹೊರಟಿದ್ದ ನನಗೆ, ಅವರು ನಮ್ಮನ್ನು ಅಗಲಿ ಹೋಗುತ್ತಾರೆಂಬ ಕಲ್ಪನೆ ಕೂಡ ಇರಲಿಲ್ಲ.

ಕಾಲುನೋವಿನಿಂದ ಬಳಲುತ್ತಿದ್ದು ವಯಸ್ಸು ಎಪ್ಪತ್ತಾರಾಗಿದ್ದರೂ, ಲವಲವಿಕೆಯಿಂದ ಎಲ್ಲೆಡೆ ಓಡಾಡಿಕೊಂಡಿದ್ದ ಅಮ್ಮ ಇನ್ನಿಲ್ಲ ಎಂದರೆ ನಂಬುವುದು ಕಷ್ಟವೇ.

ವೆಂಕಟರಾಮ್ ಅವರ ಯಶಸ್ಸಿನ ಹಿಂದೆ ಸರೋಜ ಅವರ ಪಾತ್ರ ಹಿರಿದಾಗಿತ್ತು ಎಂದು ಅವರ ಕುಟುಂಬವನ್ನು ಹತ್ತಿರದಲ್ಲಿ ಕಂಡ ಎಲ್ಲರ ಅಭಿಪ್ರಾಯ. ಸದಾ ನಗುಮುಖದಿಂದ, ಆತ್ಮೀಯತೆಯಿಂದ ಮನೆಗೆ ಬಂದವರೆಲ್ಲರಿಗೂ ಕಾಫಿ ಟೀ ಸರಬರಾಜು ಮಾಡುತ್ತಾ, ಎಲ್ಲರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಮದುವೆಯಾದ ತರುಣದಲ್ಲಿ ಬೆಂಗಳೂರಿನಲ್ಲಿ ಕಳೆದ ಕಷ್ಟದ ದಿನಗಳಲ್ಲಿ ಸಹನೆಯಿಂದಲೂ, 1975-76ರ ತುರ್ತು ಪರಿಸ್ಥಿತಿಯ ಕರಾಳ ದಿನಗಳಲ್ಲಿ, ಇಂದಲ್ಲಾ ನಾಳೆ ದೇಶದ ರಾಜಕೀಯ ಪರಿಸ್ಥಿತಿ ಸುಧಾರಿಸುತ್ತದೆ ಎಂಬ ವಿಶ್ವಾಸದಿಂದಲೂ, ವೆಂಕಟರಾಮ್‌ರವರ ಎಲ್ಲ ಕಾರ್ಯ ಚಟುವಟಿಕೆಗಳಲ್ಲಿ ಸಹಕಾರ ನೀಡುತ್ತಾ, ಹೆತ್ತ ನಾಲ್ಕು ಮಕ್ಕಳ ಜವಾಬ್ದಾರಿಯನ್ನು ಹೊತ್ತು ಅವರನ್ನು ಓದಿಸಿ ಬೆಳೆಸಿದ ಮಹಾ ತಾಯಿ ಅವರು. ಹಾಗೆಯೇ ಜಾತಿ, ಮತಗಳ ಭೇದಗಳನ್ನು ಪರಿಗಣಿಸದೆ, ರೈತ ಕಾರ್ಮಿಕರೊಡಗೂಡಿದಂತೆ ಎಲ್ಲರ ಒಳಿತಿಗಾಗಿ, ದೇಶದ ಹಿತಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದ ವೆಂಕಟರಾಮ್‌ರವರಿಂದ ಪ್ರಭಾವಿತರಾಗಿ ಮನೆಗೆ ಬರುತ್ತಿದ್ದ ಎಲ್ಲರಿಗೂ ಪ್ರೀತಿಯ ತಾಯಿಯಂತಿದ್ದರು. ಮನೆಗೆ ಬರುತ್ತಿದ್ದ, ವೆಂಕಟರಾಮ್ ಕುಟುಂಬಕ್ಕೆ ಹತ್ತಿರವಾದವರಲ್ಲಿ ಪಿ.ಜಿ.ಆರ್. ಸಿಂಧ್ಯ, ಟಿ.ಎನ್.ಸೀತಾರಾಮ್, ಆರ್.ವೆಂಕಟಸ್ವಾಮಿ, ಕೆ.ವಿ.ನಾಗರಾಜಮೂರ್ತಿ, ಶೂದ್ರ ಶ್ರೀನಿವಾಸ, ಡಾ. ಜೀವರಾಜ್ ಆಳ್ವ, ರಮೇಶ್



ಬಂದಗದ್ದೆ, ಪುರುಷೋತ್ತಮ ಕೆಲವರು.

ಬಹಳಷ್ಟು ಕಾಲ ವೆಂಕಟರಾಮ್ ಅವರ ನೆರಳಿನಲಿದ್ದು, ಅವರ ಬೆನ್ನೆಲುಬಾಗಿದ್ದ ಸರೋಜಮ್ಮ, ಕಾಲಕ್ರಮೇಣ ತಮ್ಮದೇ ಆದ ವ್ಯಕ್ತಿತ್ವವನ್ನು ಬೆಳೆಸಿಕೊಂಡು, ವೆಂಕಟರಾಮ್ ಅವರು ಗತಿಸಿದ ಕೆಲವು ವರುಷಗಳ ನಂತರ ರಾಜಕೀಯಕ್ಕಿಳಿದರು. ರಾಜಾಜಿನಗರ ರಾಮಮಂದಿರ ಕ್ಷೇತ್ರದಿಂದ ಕಾರ್ಪೋರೇಟರ್ ಆಗಿ 1983-88ರವರೆಗೆ ನಗರಪಾಲಿಕೆಯಲ್ಲಿ ಸೇವೆ ಸಲ್ಲಿಸಿದ್ದರು. 1985-86ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ಉಪಮೇಯರ್ ಆಗಿಯೂ ಕಾರ್ಯ ನಿರ್ವಹಿಸಿದ್ದರು. ಇತ್ತೀಚೆಗೆ ಸಕ್ರಿಯ ರಾಜಕೀಯದಿಂದ ದೂರವಿದ್ದರೂ, ಸಮಾಜವಾದಿ ಮತ್ತು ಇತರೆ ಸಭೆ, ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದರು. ವೆಂಕಟರಾಮ್‌ರ ಸಮಾಜವಾದಿ ಗೆಳೆಯರು, ಅತ್ಮೀಯರು, ಅಭಿಮಾನಿಗಳು ಮತ್ತು ಹಿತೈಷಿಗಳಿಗೆಲ್ಲಾ ಒಟ್ಟಾಗಿ ಸೇರುವ ತಾಣವನ್ನು ದೊರಕಿಸಿ ಆ ಬಳಗಕ್ಕೆ ಜೀವ ತುಂಬುವ ಕೊಂಡಿಯಾಗಿದ್ದರು. ಇವರೆಲ್ಲರೂ ಒಂದು ರೀತಿಯಲ್ಲಿ ಈಗ ಅನಾಥರೇ.

ನಾನು ಬೆಂಗಳೂರಿನ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೆ ಮುಂಚೆ ಅವರ ನೋವನ್ನು, ಸೊರಗಿ ಹೋಗಿದ್ದ ಅವರ ದೇಹವನ್ನು ನೋಡಿ ಕಣ್ಣೀರನ್ನು ತಡೆಯದಾದಾಗ ನನ್ನ ಕೈಯನ್ನು ಹಿಡಿದು, 'ಧೈಯವಾಗಿರು' ಎಂದು ಹೇಳಿ ಬೇಗನೆ ಗುಣವಾಗುವ ಆಸೆಯನ್ನು ನಮ್ಮೆಲ್ಲರಲ್ಲಿ ತುಂಬಿದ್ದರು.

ನನಗೆ ಮಾನವ ಮೂಳೆ, ಮಾಂಸದ ತಡಿಕೆ ಎಂದು ನೆನಪಾದದ್ದು ಅವರ ಅಸ್ಥಿಯ ಮುಂದೆ, ಕಾವೇರಿ ತಟದಲ್ಲಿ ಅಂತಿಮ ಕ್ರಿಯೆ ನಡೆಸುತ್ತಿದ್ದಾಗ. ದೀರ್ಘ ಕಾಲ ಕಾಲುನೋವಿನಿಂದ ಬಳಲುತ್ತಿದ್ದ ಅವರ ದೇಹದ ಪುಡಿ ಪುಡಿಯಾದ ಮೂಳೆಗಳನ್ನು ನೋಡಿದಾಗ. ಸಾವು ನಿಗೂಢ ಮತ್ತು ಅನಿರೀಕ್ಷಿತ ಕೂಡ!

ವೆಂಕಟರಾಮ್ ಅವರ ಸ್ವಾರ್ಥರಹಿತ ಮತ್ತು ಧೀಮಂತ ವ್ಯಕ್ತಿತ್ವ ನಮಗೆ ಎಂದೆಂದಿಗೂ ಮಾರ್ಗದರ್ಶನ. ಯೌವನದಲ್ಲೇ ಅವರನ್ನು ಕಳೆದುಕೊಂಡ ನನಗೆ ಸರೋಜ ವೆಂಕಟರಾಮ್‌ರವರು ಕೇವಲ ತಾಯಿ ಮಾತ್ರ ಆಗಿರಲಿಲ್ಲ, ತಂದೆಯೂ ಸಹ. ಐವತ್ತು ವರುಷಗಳು ಅವರೊಡನೆ ಬಾಳಿದ ಸಿಹಿನೆನಪುಗಳು, ಅವರ ಅಕ್ಕರೆಯ ಮಾತುಗಳು ನನ್ನೊಡನೆ ಸದಾ ಕಾಲವಿರುತ್ತವೆ.

■ ವಿ. ಪ್ರದೀಪ್ ಕುಮಾರ್